5 CCE PR/NSR & NSPR(D)/900/7831

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]

Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 57 ]

Total No. of Questions : 57 ]

**ಸಂಕೇತ ಸಂಖ್ಯೆ : 97-K**

**Code No. : 97-K**

**D**

**CCE PR**
**UNREVISED**
**REDUCED SYLLABUS**
**NSR & NSPR**

Question Paper Serial No. **900**

# ವಿಷಯ : ರಾಜ್ಯಶಾಸ್ತ್ರ

# Subject : POLITICAL SCIENCE

**(ಕನ್ನಡ ಮಾಧ್ಯಮ / Kannada Medium)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. & ಎನ್.ಎಸ್.ಪಿ.ಆರ್.)**

**(Private Repeater / NSR & NSPR)**

ದಿನಾಂಕ : 10. 04. 2023 ] [ Date : 10. 04. 2023

ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] [ Time : 10-30 A.M. to 1-45 P.M.

ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 57 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

[ Turn over

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ : 10 × 1 = 10**

1. ಭಾರತದಲ್ಲಿ ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷರು

   (A) ಡಾ. ಬಾಬುರಾಜೇಂದ್ರ ಪ್ರಸಾದ್

   (B) ಬಿ.ಎನ್. ರಾವ್

   (C) ಕೆ.ಎಂ. ಮುನ್ಷಿ

   (D) ಡಾ. ಬಿ.ಆರ್. ಅಂಬೇಡ್ಕರ್

2. ನಮ್ಮ ಸಂವಿಧಾನದ ಆತ್ಮ

   (A) ವಿಧಿಗಳು

   (B) ಪ್ರಸ್ತಾವನೆ

   (C) ಮೂಲಭೂತ ಹಕ್ಕುಗಳು

   (D) ಮೂಲಭೂತ ಕರ್ತವ್ಯಗಳು

3. ಪ್ರಸ್ತುತ ಭಾರತದ ಪ್ರತಿಯೊಬ್ಬ ಪ್ರಜೆಗೂ ಸಂವಿಧಾನ ನೀಡಿರುವ ಮೂಲಭೂತ ಹಕ್ಕುಗಳು

(A) 6

(B) 7

(C) 8

(D) 9

4. ಭಾರತದ ರಾಜ್ಯನೀತಿ ನಿರ್ದೇಶಕ ತತ್ವಗಳನ್ನು ಎರವಲು ಪಡೆದಿರುವುದು

(A) ಇಂಗ್ಲೆಂಡ್ ಸಂವಿಧಾನದಿಂದ

(B) ಅಮೆರಿಕ ಸಂವಿಧಾನದಿಂದ

(C) ಜಪಾನ್ ಸಂವಿಧಾನದಿಂದ

(D) ಐರ್ಲೆಂಡ್ ಸಂವಿಧಾನದಿಂದ

5. ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಗೆ ಅವಕಾಶ ನೀಡಿರುವ ಸಂವಿಧಾನದ ವಿಧಿ

(A) 322 ನೇ ವಿಧಿ

(B) 321 ನೇ ವಿಧಿ

(C) 326 ನೇ ವಿಧಿ

(D) 336 ನೇ ವಿಧಿ

6. ಭಾರತದ ರಾಜ್ಯನೀತಿ ನಿರ್ದೇಶಕ ತತ್ವಗಳು ಕಂಡುಬರುವ ಸಂವಿಧಾನದ ಭಾಗ

(A) 2 ನೇ ಭಾಗ

(B) 4 ನೇ ಭಾಗ

(C) 12 ನೇ ಭಾಗ

(D) 14 ನೇ ಭಾಗ

7. "ಗ್ರಾಮಪಂಚಾಯತಿಗಳು ಭಾರತ ಸ್ವಾಯತ್ತ ಸರ್ಕಾರದ ತಳಹದಿಯಾಗಿವೆ" ಎಂದು ಹೇಳಿದವರು

(A) ಜವಾಹರಲಾಲ್ ನೆಹರೂ

(B) ಡಾ. ಬಿ.ಆರ್. ಅಂಬೇಡ್ಕರ್

(C) ಅಬ್ದುಲ್ ನಜೀರ್ ಸಾಬ್

(D) ಮಹಾತ್ಮ ಗಾಂಧೀಜಿ

8. 'ಅರ್ಥಶಾಸ್ತ್ರ' ಕೃತಿ ರಚಿಸಿದವರು

(A) ಪಾಣಿನಿ

(B) ಚಂದ್ರಗುಪ್ತ – II

(C) ಕೌಟಿಲ್ಯ

(D) ವಿಶಾಖದತ್ತ

9. ಕೇಂದ್ರ ಲೋಕಸೇವಾಆಯೋಗದ ಸದಸ್ಯರ ಅಧಿಕಾರವಧಿ

(A) 3 ವರ್ಷಗಳು

(B) 5 ವರ್ಷಗಳು

(C) 6 ವರ್ಷಗಳು

(D) 8 ವರ್ಷಗಳು

10. ಭೂಕಂದಾಯ ದಾಖಲೆಗಳ ಸಂರಕ್ಷಣೆ, ತೆರಿಗೆ ವಸೂಲಾತಿ ಮತ್ತು ಜಮಾ ಬಂದಿಗೆ ಸಂಬಂಧಿಸಿದ ಪ್ರಕರಣಗಳನ್ನು ಇತ್ಯರ್ಥಗೊಳಿಸುವುದು

(A) ಲೋಕ ಅದಾಲತ್

(B) ಸೆಷನ್ಸ್ ನ್ಯಾಯಾಲಯ

(C) ಉಚ್ಚ ನ್ಯಾಯಾಲಯ

(D) ಕಂದಾಯ ನ್ಯಾಯಾಲಯ

**II.** 11. ***A*-ಪಟ್ಟಿಯಲ್ಲಿರುವ ರಾಜ್ಯ, ರಾಷ್ಟ್ರಗಳೊಂದಿಗೆ ಅವುಗಳ ಕೆಳಮನೆಗಳನ್ನು *B*-ಪಟ್ಟಿಯಲ್ಲಿ ನೀಡಲಾಗಿದ್ದು ಸರಿಯಾಗಿ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :** **5 × 1 = 5**

| ***A*-ಪಟ್ಟಿ** | ***B*-ಪಟ್ಟಿ** |
|---|---|
| (A) ಸಂವಿಧಾನ ರಚನಾ ಸಭೆಯ ಅಧ್ಯಕ್ಷರು | (i) ಬಿ.ಎನ್. ರಾವ್ |
| (B) ಸಂವಿಧಾನ ರಚನಾ ಸಭೆಯ ಉಪಾಧ್ಯಕ್ಷರು | (ii) ಟಿ.ಟಿ. ಕೃಷ್ಣಮಾಚಾರಿ |
| (C) ಸಂವಿಧಾನದ ಶಾಸನಾತ್ಮಕ ಸಲಹೆಗಾರರು | (iii) ಬಿ.ಎಲ್. ಮಿತ್ತರ್ |
| (D) ಕರಡು ಸಮಿತಿಯ ಅಧ್ಯಕ್ಷರು | (iv) ಸಚ್ಚಿದಾನಂದ ಸಿನ್ಹಾ |
| (E) ಸಂವಿಧಾನ ರಚನಾ ಸಭೆಯ ಹಂಗಾಮಿ ಅಧ್ಯಕ್ಷರು | (v) ಹೆಚ್.ಸಿ. ಮುಖರ್ಜಿ |
| | (vi) ಡಾ. ಬಿ.ಆರ್. ಅಂಬೇಡ್ಕರ್ |
| | (vii) ಬಾಬು ರಾಜೇಂದ್ರಪ್ರಸಾದ್ |

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **15 × 1 = 15**

12. ನಮ್ಮ ಸಂವಿಧಾನ ಜಾರಿಗೆ ಬಂದದ್ದು ಯಾವಾಗ ?

13. ಇಂಗ್ಲೆಂಡ್ ಪ್ರಜಾಪ್ರಭುತ್ವ ರಾಷ್ಟ್ರವಾದರೂ ಗಣರಾಜ್ಯವಲ್ಲ. ಏಕೆ ?

14. 1978 ರಲ್ಲಿ ತೆಗೆಯಲ್ಪಟ್ಟ ಮೂಲಭೂತ ಹಕ್ಕು ಯಾವುದು ?

15. ಬಂಧೀ ಪ್ರತ್ಯಕ್ಷೀರಣ (ಹೆಬಿಯಸ್ ಕಾರ್ಪಸ್) ಎಂದರೇನು ?

16. ಗಾಂಧಿವಾದಿ ತತ್ವಗಳೆಂದರೇನು ?

17. ಒಂದು ಉದಾರವಾದಿ ತತ್ವವನ್ನು ತಿಳಿಸಿ.

18. ಅಬ್ರಾಹಾಂ ಲಿಂಕನ್ನರ ಪ್ರಕಾರ ಪ್ರಜಾಪ್ರಭುತ್ವ ಎಂದರೇನು ?

19. ಸಂವಿಧಾನದ ಯಾವ ತಿದ್ದುಪಡಿಯ ಮೂಲಕ 'ಐಕ್ಯತೆ' ಪದವನ್ನು ಪ್ರಸ್ತಾವನೆಯಲ್ಲಿ ಸೇರಿಸಲಾಯಿತು ?

20. ಭಾರತ ಸಂವಿಧಾನದ 'ಮ್ಯಾಗ್ನಕಾರ್ಟ್' ಎಂದು ಯಾವ ಅಂಶವನ್ನು ಕರೆಯಲಾಗಿದೆ ?

21. ಭಾರತ ಸಂವಿಧಾನದ 'ರಚನಾತ್ಮಕ ಭಾಗ' ಯಾವುದು ?

22. ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆಯು ಯಾವಾಗ ಜಾರಿಗೆ ಬಂದಿತು ?

23. ನಮ್ಮ ಸಂವಿಧಾನದ 32ನೇ ವಿಧಿಯ ಪ್ರಾಮುಖ್ಯತೆ ಏನು ?

24. ಗ್ರಾಮಸಭೆಯ ಪದನಿಮಿತ್ತ ಅಧ್ಯಕ್ಷರು ಯಾರಾಗಿರುತ್ತಾರೆ ?

25. ಕೇಂದ್ರ ಲೋಕಸೇವಾ ಆಯೋಗದ ರಚನೆಗೆ ಅವಕಾಶ ನೀಡಿರುವ ಸಂವಿಧಾನದ ವಿಧಿಯನ್ನು ತಿಳಿಸಿ.

26. ಈಶಾನ್ಯ ರಾಜ್ಯಗಳ ಜಂಟಿ ಲೋಕಸೇವಾ ಆಯೋಗ ಎಲ್ಲಿದೆ ?

**IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**24 × 2 = 48**

27. ರಾಜ್ಯನೀತಿ ನಿರ್ದೇಶಕ ತತ್ವಗಳು ಮತ್ತು ಮೂಲಭೂತ ಹಕ್ಕುಗಳ ನಡುವಿನ ಯಾವುದಾದರೂ ಎರಡು ವ್ಯತ್ಯಾಸಗಳನ್ನು ತಿಳಿಸಿ.

28. ರಾಜ್ಯವು ಸಮಾಜವಾದಿ ತತ್ವಗಳ ನಿರ್ದೇಶಾತ್ಮಕ ತತ್ವಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಿದರೆ ಸಾಮಾಜಿಕ ನ್ಯಾಯ ದೊರಕುವುದು. ವಿವರಿಸಿ.

29. ರಾಜ್ಯನೀತಿ ನಿರ್ದೇಶಕ ತತ್ವಗಳ ಲಕ್ಷಣಗಳೇನು ?

30. ನಮ್ಯ ಮತ್ತು ಅನಮ್ಯ ಸಂವಿಧಾನ ಎಂದರೇನು ?

31. ಸಂವಿಧಾನದ ಪ್ರಸ್ತಾವನೆಯಲ್ಲಿರುವ ಭ್ರಾತೃತ್ವವನ್ನು ಕುರಿತು ಬರೆಯಿರಿ.

32. ನಗರ ಸ್ಥಳೀಯ ಸಂಸ್ಥೆಗಳ ವಿಧಗಳಾವುವು ?

33. ಲೋಕಸೇವಾ ಆಯೋಗದ ಪ್ರಕಾರಗಳನ್ನು ಪಟ್ಟಿ ಮಾಡಿ.

34. ನೆಹರೂರವರ ಅಭಿಪ್ರಾಯದಂತೆ 'ಜಾತ್ಯಾತೀತತೆ'ಯನ್ನು ವಿವರಿಸಿ.

35. ಉದಾರವಾದಿ ತತ್ವಗಳನ್ನು ವಿವರಿಸಿ.

36. ರಾಜ್ಯನೀತಿ ನಿರ್ದೇಶಕ ತತ್ವಗಳ ಪ್ರಮುಖ ವರ್ಗೀಕರಣಗಳು ಯಾವುವು ?

37. ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಲು ಇರಬೇಕಾದ ಅರ್ಹತೆಗಳೇನು ?

38. ಉಚ್ಚ ನ್ಯಾಯಾಲಯವು ತನ್ನ ಅಧೀನ ನ್ಯಾಯಾಲಯಗಳನ್ನು ಹೇಗೆ ನಿಯಂತ್ರಿಸುತ್ತದೆ ?

39. ಜಿಲ್ಲಾ ಪಂಚಾಯಿತಿಯ ಸ್ಥಾಯಿ ಸಮಿತಿಗಳನ್ನು ಹೆಸರಿಸಿ.

40. ರಾಜ್ಯ ಲೋಕಸೇವಾ ಆಯೋಗದ ಸದಸ್ಯರಾಗಲು ಇರಬೇಕಾದ ಅರ್ಹತೆಗಳೇನು ?

41. 1919 ರ ಕಾಯ್ದೆಯ ಸುಧಾರಣೆಗಳು ಯಾವುವು ?

42. ಮೂಲಭೂತ ಹಕ್ಕುಗಳ ಲಕ್ಷಣಗಳನ್ನು ಬರೆಯಿರಿ.

43. ಮಾಹಿತಿ ಹಕ್ಕು ಕಾಯ್ದೆಯನ್ನು ವಿವರಿಸಿ.

44. ಪ್ರತಿಬಂಧಕಾಜ್ಞೆಯನ್ನು (Prohibition) ವಿವರಿಸಿ.

45. ಗ್ರಾಮಗಳನ್ನು 'ಪುಟ್ಟ ಗಣರಾಜ್ಯ'ಗಳೆಂದು ವರ್ಣಿಸಲಾಗಿದೆ. ಏಕೆ ?

46. ಸಂವಿಧಾನಾತ್ಮಕ ಪರಿಹಾರ ಹಕ್ಕನ್ನು ಸಂವಿಧಾನದ 'ಆತ್ಮ ಮತ್ತು ಹೃದಯ' ಎಂದು ಕರೆಯಲಾಗಿದೆ ಏಕೆ ?

47. ಕಂದಾಯ ನ್ಯಾಯಾಲಯಗಳನ್ನು ಹೆಸರಿಸಿ.

48. ನಗರಸಭೆಗಳ ದಕ್ಷ ಆಡಳಿತ ನಿರ್ವಹಣೆಗಾಗಿ ರಚಿಸಿರುವ ಸ್ಥಾಯಿ ಸಮಿತಿಗಳು ಯಾವುವು ?

49. ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ಹೊಂದಿರುವ ವಿನಾಯಿತಿಗಳನ್ನು ತಿಳಿಸಿ.

50. 1861 ರ ಕಾಯ್ದೆಯು ಜಾರಿಗೆ ತಂದ ಸುಧಾರಣೆಗಳು ಯಾವುವು ?

**V. ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : $6 \times 3 = 18$**

51. ನಮ್ಮ ಸಂವಿಧಾನದ ಪ್ರಸ್ತಾವನೆಯ ಮುಖ್ಯಾಂಶಗಳೇನು ?

52. ನಮ್ಮ ಸಂವಿಧಾನ ನೀಡಿರುವ ಮೂಲಭೂತ ಹಕ್ಕುಗಳಾವುವು ?

53. 1935 ರ ಭಾರತ ಸರ್ಕಾರದ ಕಾಯ್ದೆಯು ಸಂವಿಧಾನದ ರಚನೆಯಲ್ಲಿ ಪ್ರಮುಖ ಪಾತ್ರವಹಿಸಿದೆ. ಹೇಗೆ ?

54. ಉಚ್ಚ ನ್ಯಾಯಾಲಯದ ಅಧಿಕಾರ ಮತ್ತು ಕಾರ್ಯಗಳನ್ನು ವಿವರಿಸಿ.

55. ಜಿಲ್ಲಾ ಪಂಚಾಯಿತಿಯ ರಚನೆಯನ್ನು ತಿಳಿಸಿ.

56. ಕರ್ನಾಟಕ ಲೋಕಸೇವಾ ಆಯೋಗವು ನಿರ್ವಹಿಸುವ ಕಾರ್ಯಗಳು ಯಾವುವು ?

**VI. ಈ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : $1 \times 4 = 4$**

57. ನಗರ ಪಾಲಿಕೆಗಳು ನಿರ್ವಹಿಸಬೇಕಾದ ಕಾರ್ಯಗಳನ್ನು ವಿವರಿಸಿ.